# الاحتفال بليلة النصف من شعبان وليلة الإسراء والمعراج
# ಬರಾಅತ್ ರಾತ್ರಿ ಮತ್ತು ಇಸ್ರಾಅ್-ಮಿಅ್‌ರಾಜ್

الحمد لله رب العالمين، والصلاة والسلام على أشرف الأنبياء والمرسلين، أما بعد :

ಪ್ರವಾದಿ(ﷺ)ರವರ ಚರ್ಯೆಯಲ್ಲಿ ಇಲ್ಲದ ಹಲವು ವಿಶ್ವಾಸಾಚಾರಗಳು ಇತ್ತೀಚಿನ ಕಾಲದಲ್ಲಿ ಮುಸ್ಲಿಮ್ ಸಮೂಹದಲ್ಲಿ ನೆಲೆಯೂರಿದೆ. ಅವುಗಳನ್ನು ದೃಢೀಕರಿಸಲು ಪೌರೋಹಿತ್ಯವು ಶಕ್ತಿ ಮೀರಿ ಪ್ರಯತ್ನಿಸುತ್ತಿದೆ.

ಶಅಬಾನ್ ತಿಂಗಳ ಭಾಗವಾಗಿ ಮುಸ್ಲಿಮ್ ಸಮೂಹದ ಕೆಲವರಲ್ಲಿ ಅಂಟಿಕೊಂಡಿರುವ ಆಧಾರರಹಿತವಾದ ವಿಶ್ವಾಸಾಚಾರಗಳನ್ನು ಇಸ್ಲಾಮಿನ ಪ್ರಮಾಣಗಳಾದ ಖುರ್‌ಆನ್ ಮತ್ತು ಸುನ್ನತ್‌ನ ಆಧಾರದಲ್ಲಿ ತಿಳಿಯಪಡಿಸಲು ಈ ಮೂಲಕ ಉದ್ದೇಶಿಸುತ್ತೇವೆ. ಖುರ್‌ಆನ್ ಮತ್ತು ಸುನ್ನತ್‌ನ ಆಧಾರದಲ್ಲಿ ಪಾವಿತ್ರ್ಯತೆಯಿರುವ ತಿಂಗಳುಗಳು: ದುಲ್‌ಕಅದ್, ದುಲ್‌ಹಜ್ಜ್, ಮುಹರ್ರಮ್ ಮತ್ತು ರಜಬ್. ಇದು ಈ ವಿಷಯದ ಬಗ್ಗೆ ಮೂಲವಾಗಿ ತಿಳಿದಿರಬೇಕಾದ ವಾಸ್ತವಿಕತೆಯಾಗಿದೆ.

## الاحتفال بليلة النصف من شعبان
## ಶಅಬಾನ್ ತಿಂಗಳು ಮತ್ತು ಬರಾಅತ್ ರಾತ್ರಿ

ಪವಿತ್ರ ಖುರ್‌ಆನಿನ 44ನೇ ಅಧ್ಯಾಯವಾದ ಸೂರಃ ದುಖಾನಿನ 2ನೇ ಆಯತ್‌ನಲ್ಲಿ ಹೇಳಿರುವ ಅನುಗ್ರಹೀತವಾದ ರಾತ್ರಿಯ ಉದ್ದೇಶ ಶಅಬಾನ್ 15 ಎಂದು ಒಂದು ವಿಭಾಗ ಜನರು ವಾದಿಸುತ್ತಿದ್ದಾರೆ. ಅಂದು ಪ್ರತ್ಯೇಕ ತರದ ಆರಾಧನೆಗಳನ್ನು ಅನುಷ್ಠಿಸುತ್ತಾ, ಪ್ರತ್ಯೇಕ ತರಹದ ಅಡುಗೆಗಳನ್ನು ಸಿಹಿ ತಿಂಡಿಗಳನ್ನು ತಯಾರಿಸಿ ವಿತರಣೆ ಮಾಡುತ್ತಾರೆ, ಅಂದು ಪ್ರತ್ಯೇಕ ಪ್ರತಿಫಲವಿದೆಯೆಂದು ಭಾವಿಸಿ ಪ್ರತ್ಯೇಕ ಖುರ್‌ಆನ್ ಪಾರಾಯಣ, ವೃತಾನುಷ್ಠಾನ ಎಂಬಿತ್ಯಾದಿ ಸಂಪ್ರದಾಯಗಳು ಹಲವು ಜನರಲ್ಲಿ ಕಾಣ ಸಿಗುತ್ತದೆ; ಇವುಗಳು ಪವಿತ್ರ ಖುರ್‌ಆನಿನ ಶಕ್ತವಾದ ಆಧಾರಗಳಿಗೆ ತದ್ವಿರುದ್ಧವಾದವುಗಳಾಗಿವೆ. ಕಾರಣ ಖುರ್‌ಆನ್ ಈ ರೀತಿ ಹೇಳುತ್ತದೆ:
"ಖಂಡಿತ ನಾವು ಅದನ್ನು(ಖುರ್‌ಆನನ್ನು) ಒಂದು ಅನುಗ್ರಹೀತವಾದ ರಾತ್ರಿಯಂದು ಅವತೀರ್ಣ ಗೊಳಿಸಿದ್ದೇವೆ."(ಸೂರಃ ದುಖಾನ್-2)

ಇಲ್ಲಿ ಪ್ರಸ್ತುತಃ ರಾತ್ರಿಯಿಂದಿರುವ ಉದ್ದೇಶ ಲೈಲತುಲ್ ಖದ್ರ್ ಆಗಿದೆ ಮತ್ತು ಅದು ರಮದಾನ್‌ನಲ್ಲಾಗಿದೆ. ಈ ವಾಸ್ತವಿಕತೆಯನ್ನು ಖುರ್‌ಆನ್ ಮತ್ತೊಂದು ಆಯತ್‌ನ ಮೂಲಕ ನಮಗೆ ಸ್ಪಷ್ಟಪಡಿಸುತ್ತದೆ.
"ಖಂಡಿತ, ನಾವು ಅದನ್ನು(ಖುರ್‌ಆನನ್ನು) ಲೈಲತುಲ್ ಖದ್ರ್‌ನಲ್ಲಿ ಅವತೀರ್ಣ ಗೊಳಿಸಿದ್ದೇವೆ. ಅದರ ಕುರಿತು ನೀನು ಏನನ್ನು ತಿಳಿದಿರುವೆ. ಅದು ಸಾವಿರ ತಿಂಗಳಿಗಿಂತ ಶ್ರೇಷ್ಠವಾದ ಒಂದು ರಾತ್ರಿಯಾಗಿದೆ"(ಸೂರತುಲ್ ಖದ್ರ್).

ಮೇಲೆ ಹೇಳಲ್ಪಟ್ಟ ರಾತ್ರಿ ರಮದಾನಿನಲ್ಲಾಗಿದೆ ಎಂಬ ವಿಷಯದಲ್ಲಿ ಎಲ್ಲರಿಗೂ ಒಮ್ಮತಾಭಿಪ್ರಾಯವಿದೆ. ಪ್ರವಾದಿ(ﷺ)ರವರು ರಮದಾನನ್ನು ಈ ರೀತಿ ಪರಿಚಯ ಮಾಡಿ ಕೊಟ್ಟಿರುತ್ತಾರೆ:
"ಇದೋ ನಿಮಗೆ ಅನುಗ್ರಹೀತವಾದ ಒಂದು ತಿಂಗಳು ಬಂದೊದಗಿದೆ. ಅದರಲ್ಲಿ ಸಾವಿರ ತಿಂಗಳಿಗಿಂತ ಶ್ರೇಷ್ಠವಾದ ಒಂದು ರಾತ್ರಿಯಿದೆ....."(ಬೈಹಕಿ).

ಖುರ್‌ಆನ್ ಅವತೀರ್ಣವಾಗಿರುವುದು ರಮದಾನ್ ತಿಂಗಳಲ್ಲಾಗಿದೆ ಎಂಬ ವಿಷಯವನ್ನು ಖುರ್‌ಆನ್‌ನಿಂದಲೇ ತಿಳಿಯಬಹುದು. "ಮಾನವರಿಗೆ ಮಾರ್ಗದರ್ಶನವಾಗಿ, ಸತ್ಯಾಸತ್ಯತೆಯನ್ನು ಬೇರ್ಪಡಿಸಿ ತೋರಿಸಲು ಮತ್ತು ಮಾರ್ಗದರ್ಶನಕ್ಕಿರುವ ಆಧಾರಗಳೊಂದಿಗೆ ಖುರ್‌ಆನ್ ಅವತೀರ್ಣ ಗೊಂಡಿರುವ ತಿಂಗಳಾಗಿದೆ ರಮದಾನ್" (ಅಲ್ ಬಖರಃ-185).

ಪ್ರಸಿದ್ಧ ಖುರ್‌ಆನ್ ವ್ಯಾಖ್ಯಾನಕಾರರಾದ ಅಲ್ಲಾಮಾ ಇಬ್ನ್ ಕಸೀರ್(ﷺ)ರವರು ಹೇಳಿರುವುದನ್ನು ಗಮನಿಸಿರಿ:

((ومن قال: إنها ليلة النصف من شعبان كما روي عن عكرمة فقد أبعد النجعة، فإن نص القرآن أنها في رمضان،))

"ಯಾರಾದರೂ ಪ್ರಸ್ತುತಃ ರಾತ್ರಿ(ಅನುಗ್ರಹೀತ ರಾತ್ರಿ) ಶಅಬಾನ್ 15ರಂದು ಆಗಿದೆ ಎಂದರೆ ಅವನು ಸತ್ಯದಿಂದ ಬಹು ದೂರ ಸಾಗಿ ಬಿಟ್ಟನು. ಕಾರಣ ಖುರ್‌ಆನಿನ ನಸ್ಸ್(ಸ್ಪಷ್ಟವಾದ ಅಭಿಪ್ರಾಯವು) ಅದು ರಮದಾನ್ ತಿಂಗಳಲ್ಲೆಂದಾಗಿದೆ. (ತಫ್ಸೀರ್ ಇಬ್ನ್ ಕಸೀರ್: 4/13)

## ಜೀವನಾಧಾರ (ರಿಝ್ಕ್) ನಿರ್ಣಯಿಸುವ ರಾತ್ರಿ !?

ಶಅಬಾನ್ ತಿಂಗಳು 15ನೇ ದಿನಕ್ಕೆ ಬರಾಅತ್ ರಾತ್ರಿ ಎನ್ನಲಾಗುವುದೆಂದೂ, ಪ್ರಸ್ತುತಃ ದಿನದಂದು ಓರ್ವ ಮನುಷ್ಯನ ಒಂದು ವರ್ಷಕ್ಕಿರುವ ಜೀವನಾಧಾರವನ್ನು ಮತ್ತು ಇತರ ಕಾರ್ಯಗಳನ್ನು ನಿರ್ಣಯಿಸಲಾಗುವುದೆಂದೂ ಎಂಬಿತ್ಯಾದಿ ವೀಕ್ಷಣೆಗಳು ಪ್ರಮಾಣಗಳ ಬೆಂಬಲವಿಲ್ಲದ ಹಾಗೂ ನೂತನವಾಗಿ ನಿರ್ಮಿಸಲ್ಪಟ್ಟವುಗಳಲ್ಲಿ ಒಳಪಡುತ್ತವೆ.

ಪ್ರತಿಯೊಬ್ಬನಿಗೆ ಒಂದು ವರ್ಷಕ್ಕಿರುವ ಜೀವನಾಧಾರನ್ನು ಮತ್ತು ಇತರ ಕಾರ್ಯಗಳನ್ನು ನಿರ್ಣಯಿಸುವುದು ಶಅಬಾನ್ 15ರಂದಾಗಿದೆಯೆಂದೂ ಆದುದರಿಂದ ಅಂದು ಕ್ಲಪ್ತವಾಗಿ ಮೂರು ಯಾಸೀನ್ ಆಹಾರದ ವಿಶಾಲತೆಗೆ, ವಯಸ್ಸು ವೃದ್ಧಿಸಲು ಮತ್ತು ಮರಣ ಹೊಂದಿದವರ ಒಳಿತಿಗಾಗಿ ಪಾರಾಯಣ ಮಾಡಬೇಕೆಂದೂ ಹೇಳಲ್ಪಡುವ ವಾದವು ಆಧಾರರಹಿತವಾಗಿವೆ. ಆದರೆ

ಆಹಾರದ ವಿಶಾಲತೆಯನ್ನು ಬಯಸುವವರು "ಕುಟುಂಬ ಸಂಬಂಧವನ್ನು ಸಂಸ್ಥಾಪಿಸಿರಿ" (ಹದೀಸ್ ಬುಖಾರಿ)

ಮತ್ತು "ವಯಸ್ಸು ವೃದ್ಧಿಸಲಿಕ್ಕಾಗಿ ಪುಣ್ಯಕರ್ಮಗಳನ್ನು ಅಧಿಕ ಗೊಳಿಸಿರಿ (ಹದೀಸ್ ತಿರ್ಮಿದಿ) ಎಂದು ಪ್ರವಾದಿ(ﷺ)ರವರು ನಿರ್ದೇಶಿಸಿದ್ದಾರೆ.

ಮರಣ ಹೊಂದಿದವರ ಹೆಸರಿನಲ್ಲಿ ಖುರ್‌ಆನ್ ಪಾರಾಯಣ ಮಾಡುವುದು ಖುರ್‌ಆನ್ ಮತ್ತು ಸುನ್ನತಿನ ಅಧ್ಯಯನಗಳಿಗೆ ವಿರುದ್ಧವಾದೆ. ಸೂರತ್ ಯಾಸೀನ್, ಖುರ್‌ಆನ್ ಜೀವವುಳ್ಳವರಿಗೆ ಉಪದೇಶವಾಗಿಯೆಂಬ ಆಶಯವನ್ನು ಕಲಿಸುವ ಅಧ್ಯಾಯವಾಗಿದೆ. ಆದರೂ ಆ ಸೂರಃವನ್ನೇ ಮರಣ ಹೊಂದಿದವರಿಗಾಗಿ ಪಾರಾಯಣ ಮಾಡುತ್ತಿರುವುದು ಎಂತಹ ವಿರೋಧಾಬಾಸವಾಗಿದೆ. ಖುರ್‌ಆನ್ ಹೇಳುತ್ತದೆ:

{....إِنْ هُوَ إِلَّا ذِكْرٌ وَقُرْآنٌ مُبِينٌ (69) لِيُنْذِرَ مَنْ كَانَ حَيًّا وَيَحِقَّ الْقَوْلُ عَلَى الْكَافِرِينَ (70)}

"ನಿಶ್ಚಯವಾಗಿಯೂ ಇದು ವ್ಯಕ್ತವಾದ ಉಪದೇಶ ಮತ್ತು ಖುರ್‌ಆನ್ ಆಗಿದೆ. ಇದು ಜೀವವುಳ್ಳ ಪ್ರತಿಯೊಬ್ಬನಿಗೆ ಮನ್ನೆಚ್ಚರಿಕೆ ನೀಡಲಿಕ್ಕಿರುವುದಾಗಿದೆ........" (ಯಾಸೀನ್: 69,70)

ಈ ದಿನದಲ್ಲಿ ವ್ರತಾನುಷ್ಠಿಸಲು ಮತ್ತು ರಾತ್ರಿ ಪ್ರತ್ಯೇಕವಾದ ನಮಾಝ್ ನಿರ್ವಹಿಸಲು ಕೆಲವರು ಪ್ರಚಾರ ಮಾಡುತ್ತಿರುವುದೂ ಆಧಾರರಹಿತವಾಗಿವೆ.(-ಅನುವಾದಕರು)

ಬರಾಅತ್ ರಾತ್ರಿಯನ್ನು ಮತ್ತು ಇಸ್ರಾಅ್ ಮಿಅ್‌ರಾಜ್‌ನ ರಾತ್ರಿಯನ್ನು ಆಚರಿಸುವುದು ಕೇರಳ-ಕರ್ನಾಟಕ ಮತ್ತು ಇತರ ಮುಸ್ಲಿಮರ ವಿಶ್ವಾಸಾಚಾರಗಳಲ್ಲಿ ನೂತನವಾಗಿ ಬಂದು ಸೇರಿರುವ ಅನಾಚಾರಗಳಾಗಿವೆ. ಸೌದೀ ಅರೇಬಿಯಾದ ಗ್ರಾಂಡ್ ಮುಫ್ತಿಯಾಗಿದ್ದ ಮತ್ತು ಪಂಡಿತರ ಒಕ್ಕೂಟದ ಅಧ್ಯಕ್ಷರೂ ಆಗಿದ್ದ ಶೈಖ್ ಅಬ್ದುಲ್ ಅಝೀಝ್ ಇಬ್ನ್ ಬಾಝ್(ﷺ)ರವರೊಡನೆ ಈ ವಿಷಯದಲ್ಲಿ ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದ ಅರಬಿ ಮೂಲದ ಕನ್ನಡಾನುವಾದವನ್ನು ಕೆಳಗೆ ಕೊಡಲಾಗುವುದು.

ಸತ್ಯವನ್ನು ತಿಳಿಯಲು, ಅದನ್ನು ಅನುಸರಿಸಲು ಮತ್ತು ಜೀವನದಲ್ಲಿ ಅಳವಡಿಸಲು ಅಲ್ಲಾಹನು ನಮಗೆ ತೌಫೀಕ್ ನೀಡಲಿ. (ಆಮೀನ್)

ಧರ್ಮದಲ್ಲಿ ಪ್ರವಾದಿ(ﷺ)ರವರು ಕಲಿಸಿ ಕೊಡದ ಮತ್ತು ಜನರಿಂದ ಸ್ವಯಂ ನಿರ್ಮಿಸಲ್ಪಟ್ಟ ಸರ್ವ ಕಾರ್ಯಗಳು ನೂತನ ನಿರ್ಮಿತವಾಗಿವೆ. ಆದುದರಿಂದ ಅವುಗಳು ತಿರಸ್ಕರಿಸಲ್ಪಡಬೇಕಾದುದಾಗಿದೆ ಎಂದು ಖುರ್‌ಆನ್ ಮತ್ತು ಪ್ರವಾದಿ(ﷺ)ರವರ ವಚನಗಳು ಸ್ಪಷ್ಟಪಡಿಸುತ್ತವೆ. ಅವುಗಳನ್ನು ನಿರ್ಮಿಸಿದವನು ಒಳಿತನ್ನು ಉದ್ದೇಶಿಸಿ ಮಾಡಿದರೂ ಸರಿಯೇ ಅದು ಅನುವದನೀಯವಾಗುವುದಿಲ್ಲ. ಸ್ವಹಾಬಿಗಳು ಮತ್ತು ಸಲಫುಗಳಾದ ಪೂರ್ವಿಕ ವಿದ್ವಾಂಸರು ಈ ವಿಷಯವನ್ನು ಪ್ರತ್ಯೇಕವಾಗಿ ಒತ್ತಿ

ಹೇಳಿದ್ದಾರೆ ಮತ್ತು ಬಿದ್‌ಅತ್‌ಗಳ ವಿರುದ್ಧ ಜನರಿಗೆ ಮುನ್ನಚರಿಕೆಯನ್ನು ಕೊಟ್ಟಿದ್ದಾರೆ. ಈ ರೀತಿ ಶಅಬಾನ್ 15ರಂದು ಬರಾಅತ್ ರಾತ್ರಿಯ ಹೆಸರಿನಲ್ಲಿ ಜನರು ಸ್ವಯಂ ನಿರ್ಮಿಸಿರುವ ಆಚಾರಗಳು ಅವುಗಳಲ್ಲೊಂದು. ಕೆಲವರು ಶಅಬಾನ್ 15ರಂದು ಪ್ರತ್ಯೇಕ ಉಪವಾಸವನ್ನು ಅನುಷ್ಠಿಸುತ್ತಾರೆ ಮತ್ತು ಅಂದಿನ ರಾತ್ರಿಯಲ್ಲಿ ಪ್ರತ್ಯೇಕ ನಮಾಝನ್ನು ನಿರ್ವಹಿಸುತ್ತಾರೆ. ಇವುಗಳಿಗೆ ಯಾವುದೇ ರೀತಿಯ ಆಧಾರಗಳಿಲ್ಲ. ಪ್ರಸ್ತುತಃ ದಿನದ ಶ್ರೇಷ್ಠತೆಯ ಬಗ್ಗೆ ಕೆಲವು ದುರ್ಬಲವಾದ ಹದೀಸ್‌ಗಳು ಉಲ್ಲೇಖಿಸಲ್ಪಟ್ಟಿವೆ. ಅವುಗಳು ಪುರಾವೆಗೆ ಅರ್ಹವಾದುದಲ್ಲ. ಆ ದಿನದಲ್ಲಿ ನಿರ್ವಹಿಸಲ್ಪಡುವ ನಮಾಝ್‌ನ ವಿಷಯದಲ್ಲಿ ಬಂದಿರುವ ಸರ್ವ ಹದೀಸ್‌ಗಳು ಸುಳ್ಳು ಹದೀಸ್‌ಗಳಾಗಿವೆ. ಈ ವಿಷಯವನ್ನು ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಆ ದಿನವನ್ನು ಆಚರಿಸುವುದು ಬಿದ್‌ಅತ್ ಆಗಿದೆ ಎಂದು ಹೆಚ್ಚಿನ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಈ ವಿಷಯದಲ್ಲಿ ಉಲ್ಲೇಖಿಸಲ್ಪಟ್ಟ ಸರ್ವ ಹದೀಸ್‌ಗಳು ದುರ್ಬಲವಾದವುಗಳಾಗಿವೆ.

ಧರ್ಮದ ಯಾವುದಾದರೊಂದು ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾದರೆ ಅದನ್ನು ಪ್ರಮಾಣಗಳ ಕಡೆಗೆ ಮರಳಿಸಬೇಕು. ಖುರ್‌ಆನ್ ಮತ್ತು ಸುನ್ನತ್‌ನ ಕಡೆಗೆ ಮರಳಿಸಿ ಅಲ್ಲಾಹನ ಮತ್ತು ಪ್ರವಾದಿ(ﷺ)ರವರ ವಿಧಿ ಬಂದ ಬಳಿಕ ಓರ್ವ ವಿಶ್ವಾಸಿ ಮತ್ತು ವಿಶ್ವಾಸಿನಿಗೆ ಸ್ವಯಂ ತೀರ್ಮಾನ ಕೈಗೊಳ್ಳುವ ಹಕ್ಕಿಲ್ಲ.

ಅಲ್ ಹಾಫಿಝ್ ಇಬ್ನ್ ರಜಬ್(ﷺ)ರವರು ಶಅಬಾನ್ 15ರ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನು ಹೇಳಿದ್ದಾರೆ. ಆದರೆ ಆ ಅಭಿಪ್ರಾಯಗಳು ಅಧಾರರಹಿತವಾದವುಗಳೆಂಬುವುದು ವಿದ್ವಾಂಸರುಗಳ ವೀಕ್ಷಣೆಯಾಗಿದೆ. ಇಂತಹ ಅಭಿಪ್ರಾಯಗಳು ದುರ್ಬಲ ಮತ್ತು ಅಪರಿಚಿತವಾದವುಗಳಾಗಿವೆ. ಕಾರಣ ಶರೀಯತಿನ ಆಧಾರಗಳ ಮೂಲಕ ದೃಢೀಕರಿಸಲ್ಪಡದ ಯಾವೊಂದನ್ನೂ ಅಲ್ಲಾಹನ ದೀನ್‌ನಲ್ಲಿ ನಿಯಮವೆಂದು ಓರ್ವ ಮುಸ್ಲಿಮ್ ಹೇಳಕೂಡದು. ಪ್ರವಾದಿ(ﷺ)ರವರ ಹದೀಸ್ ಈ ವಿಷಯವನ್ನು ನಮಗೆ ಕಲಿಸುತ್ತದೆ.

ಪ್ರವಾದಿ(ﷺ)ರವರು ನುಡಿಯುತ್ತಾರೆ:

« مَنْ عَمِلَ عَمَلاً لَيْسَ عَلَيْهِ أَمْرُنَا فَهُوَ رَدٌّ »

“ನಮ್ಮ ನಿರ್ದೇಶನವಿಲ್ಲದವುಗಳನ್ನು ಯಾರಾದರೂ(ಧರ್ಮದ ಹೆಸರಿನಲ್ಲಿ) ಅನುಷ್ಠಿಸಿದರೆ ಅದು ತಳ್ಳಲ್ಪಡಬೇಕಾದುದಾಗಿವೆ” (ಬುಖಾರಿ,ಮುಸ್ಲಿಮ್).

ಅಬೂಬಕರ್ ಅಲ್ ತ್ವರ್‌ತೂಶಿ(ﷺ) ತಮ್ಮ “ಅಲ್‌ಹವಾದಿಸು ವಲ್‌ಬಿದಉ” ‘الحوادث و البدع’ಎಂಬ ಗ್ರಂಥದಲ್ಲಿ ಹೇಳುತ್ತಾರೆ: ‘ನಮ್ಮ ಶೇಖ್‌ರಾಗಲಿ ಕರ್ಮಶಾಸ್ತ್ರ ಪಂಡಿತರಾಗಲಿ ಶಅಬಾನ್ 15ರ ಕಡೆಗೆ ತಿರುಗಿ ನೋಡಿರುವುದಾಗಿ(ಆ ದಿನವನ್ನು ಪ್ರತ್ಯೇಕವಾಗಿ ಪರಿಗಣಿಸಿರುವುದಾಗಿ) ನಾವು ಕಾಣಲಿಲ್ಲ. ಇತರ ತಿಂಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಶಅಬಾನ್ ತಿಂಗಳಿಗೆ ಅವರು ಕೊಡುತ್ತಿರಲಿಲ್ಲ.’ ಶಅಬಾನ್ 15, ಲೈಲತುಲ್ ಖದ್ರ್‌ನಂತೆ ಪ್ರತಿಫಲಾರ್ಹವೆಂದು ಝಿಯಾದ್ ಇಬ್ನ್ ನುಮೈರ್ ಹೇಳುತ್ತಿರುವುದಾಗಿ ಅಬೂ ಮುಲೈಕ ಎಂಬ ಪಂಡಿತರ ಗಮನಕ್ಕೆ ತಂದಾಗ ಅವರು ಹೀಗೆ ಪ್ರತಿಕ್ರಿಯಿಸಿದರು: ಅವರು ಹಾಗೆ ಹೇಳುವುದನ್ನು ನಾನು ಆಲಿಸಿರುತ್ತಿದ್ದರೆ ಮತ್ತು ಆಗ ನನ್ನ ಕೈಯಲ್ಲಿ ಒಂದು ಬೆತ್ತವಿರುತ್ತಿದ್ದರೆ ಖಂಡಿತ ನಾನು ಅವರನ್ನು ಹೊಡೆದು ಸರಿಪಡಿಸುತ್ತಿದ್ದೆ. ಝಿಯಾದ್ ಓರ್ವ ಕಠಿಣನಾಗಿದ್ದಾನೆ.

ಅಲ್ಲಾಮಾ ಶೌಕಾನಿ(ﷺ)ರವರು ತಮ್ಮ ‘ಅಲ್‌ಫವಾಇದುಲ್ ಮಜ್‌ಮೂಅಃ’ – الفوائد المجموعة ಎಂಬ ಗ್ರಂಥದಲ್ಲಿ ಹೇಳುತ್ತಾರೆ: ಓ (ಜನರೇ), ಶಅಬಾನ್ ತಿಂಗಳ ಅರ್ಧದ ರಾತ್ರಿಯಂದು ಪ್ರತಿಯೊಂದು ರಕಅತ್‌ನಲ್ಲಿ ಹತ್ತು ಸಲ ಫಾತಿಹ ಮತ್ತು ಸೂರ ಇಖ್‌ಲಾಸನ್ನು ಪಠಿಸಿ ನೂರು ರಕಅತ್ ನಮಾಝ್ ನಿರ್ವಹಿಸಿದರೆ ನಿನ್ನ ಸರ್ವ ಆವಶ್ಯಕತೆಗಳನ್ನು ಅಲ್ಲಾಹನು ನೆರವೇರಿಸಿ ಕೊಡುವನು ಎಂಬುವುದು ಸುಳ್ಳು ಹದೀಸ್ ಆಗಿದೆ. ಅದರ ಪ್ರತಿಫಲದ ಬಗ್ಗೆ ಹೇಳಲ್ಪಡುವ ವಿಷಯವು ಬುದ್ಧಿಯಿರುವ ಮನುಷ್ಯನಿಂದ ಸ್ವೀಕೃತವಲ್ಲದ ರೂಪದಲ್ಲಾಗಿವೆ. ಮಾತ್ರವಲ್ಲ ಆ ವರದಿಯ ಸನದ್(ಪರಂಪರೆ)ನಲ್ಲಿರುವ ಹಲವರು ಅಜ್ಞಾತರಾಗಿದ್ದಾರೆ. ಬೇರೆ ದಾರಿಯಿಂದ ಆ ಹದೀಸ್ ವರದಿಯಾಗಿರುವುದಾದರೂ ಅದರ ಸನದ್‌ನಲ್ಲಿರುವವರೂ ಅಜ್ಞಾತರಾಗಿದ್ದಾರೆ. ತಮ್ಮ ‘ಮುಖ್‌ತಸರ್’ (مختصر)ಎಂಬ ಗ್ರಂಥದಲ್ಲಿ ಅವರು ಹೇಳುತ್ತಾರೆ: ಶಅಬಾನ್ ತಿಂಗಳ 15ರಂದಿರುವ ಉಪವಾಸ ಸುಳ್ಳಾಗಿದೆ.

ಹಾಗೆಯೇ ಅಲೀ(ﷺ)ರವರಿಂದ ಇಬ್ನ್ ಹಿಬ್ಬಾನ್ ಉಲ್ಲೇಖಿಸುತ್ತಾರೆ: “ಶಅಬಾನ್ 15ರಂದು ರಾತ್ರಿ ನೀವು ನಮಾಝ್ ನಿರ್ವಹಿಸಿರಿ ಮತ್ತು ಹಗಲು ಉಪವಾಸ ಆಚರಿಸಿರಿ’ ಎಂಬ ಹದೀಸ್ ದುರ್ಬಲವಾಗಿದೆ. ಇಮಾಮ್ ಲಾಲಿಕಾಇ ಹೇಳುತ್ತಾರೆ: ಪ್ರತಿಯೊಂದು ರಕಅತ್‌ನಲ್ಲಿ ಸೂರಃ ಇಖ್‌ಲಾಸನ್ನು ಹತ್ತು ಸಲ ಪಠಿಸುತ್ತಾ ನಮಾಝ್ ನಿರ್ವಹಿಸಬೇಕೆಂದು ಉಲ್ಲೇಖಿಸಲ್ಪಟ್ಟಿರುವ ಮೂರು ಹದೀಸ್‌ಗಳಲ್ಲೂ ದುರ್ಬಲರು ಮತ್ತು ಮಜ್‌ಹೂಲ್‌ಗಳು(ತಿಳಿಯಲ್ಪಡದವರು) ಇದ್ದಾರೆ. ಅದೇ ರೀತಿ ಮುವತ್ತು ಸಲ ಸೂರಃ ಇಖ್‌ಲಾಸ್ ಪಠಿಸುವ ಮೂಲಕ 12 ರಕಅತ್ ಮತ್ತು 14 ರಕಅತ್ ನಮಾಝ್ ನಿರ್ವಹಿಸಬೇಕೆಂಬುವುದೂ ಸುಳ್ಳು

ವರದಿಯಾಗಿವೆ.

ಈ ವರದಿಯಿಂದ ಕೆಲವು ಕರ್ಮ ಶಾಸ್ತ್ರ ಪಂಡಿತರು ಮತ್ತು ಇತರರು ವಂಚಿತರಾಗಿದ್ದಾರೆ. ಶಅಬಾನ್ 15ರಂದು ನಮಾಝ್ ನಿರ್ವಹಿಸುವ ವಿಷಯದಲ್ಲಿ ವಿವಿಧ ವರದಿಗಳು ಉಲ್ಲೇಖಿತವಾಗಿರುವುದಾದರೂ ಅವುಗಳೆಲ್ಲವೂ ಸುಳ್ಳು ಮತ್ತು ಬಾತಿಲ್ ಆಗಿವೆ. ಪ್ರಸ್ತುತಃ ದಿನದಂದು ಪ್ರವಾದಿ(ﷺ)ರವರು ಬಖೀಅ್‌ನಲ್ಲಿರುವ ಸ್ಮಶಾನಕ್ಕೆ ಹೋಗುತ್ತಿದ್ದರೆಂದೂ, ಆ ರಾತ್ರಿಯಂದು ಅಲ್ಲಾಹನು ಒಂದನೇ ಆಕಾಶಕ್ಕೆ ಇಳಿದು ಬರುವನೆಂದೂ, ಕಲ್‌ಬ್ ಗೋತ್ರದವರ ಆಡಿನ ಮೈಯಲ್ಲಿರುವ ರೋಮದ ಗಾತ್ರದಷ್ಟು ಪಾಪಗಳನ್ನು ಅಲ್ಲಾಹನು ಆ ರಾತ್ರಿಯಲ್ಲಿ ಕ್ಷಮಿಸುವನೆಂದೂ ಇಮಾಮ್ ತಿರ್ಮಿದಿ(ﷺ)ರವರು ಆಯಿಶಾ(ﷺ)ರವರಿಂದ ಉಲ್ಲೇಖಿಸಿದ ಹದೀಸ್ ಕೂಡಾ ಸಹೀಹಲ್ಲ. ಅದೂ ಬಲಹೀನವೂ ಮಧ್ಯೆದಲ್ಲಿ ಸನದ್ ಮುರಿದು ಹೋದದ್ದೂ ಆಗಿದೆ.

ಅಲ್ ಹಾಫಿಝುಲ್ ಇರಾಖಿ ಹೇಳುತ್ತಾರೆ: ಶಅಬಾನ್ 15ರ ವಿಷಯದಲ್ಲಿ ವರದಿಯಾಗಿರುವ ಹದೀಸ್‌ಗಳು ಪ್ರವಾದಿ(ﷺ)ರವರ ಹೆಸರಿನಲ್ಲಿ ಮಾಡಿರುವ ಸುಳ್ಳಾರೋಪಗಳಾಗಿವೆ. ಇಮಾಮ್ ನವವಿ(ﷺ)ರವರು ತಮ್ಮ ಮಜ್‌ಮೂಅ್ ಎಂಬ ಗ್ರಂಥದಲ್ಲಿ ಹೇಳುತ್ತಾರೆ: "ರಜಬ್ ತಿಂಗಳ ಪ್ರಥಮ ಶುಕ್ರವಾರ ಮಗ್ರಿಬ್ ಮತ್ತು ಇಶಾದ ಮಧ್ಯೆಯಿರುವ ವೇಳೆಯಲ್ಲಿ ರಗಾಇಬ್ ಎಂಬ ಹೆಸರಲ್ಲಿ 12 ರಕಅತ್ ನಮಾಝ್ ಇರುವುದಾಗಿ ಹೇಳಲ್ಪಡುವುದು ಮತ್ತು ಶಅಬಾನ್ 15ರಂದು ನಿರ್ವಹಿಸಲಿಕ್ಕಿದೆಯೆಂದು ಹೇಳಲ್ಪಡುವ ನೂರು(100) ರಕಅತ್ ನಮಾಝ್‌ಗಳು ಬಿದ್‌ಅತ್ ಆಗಿವೆ ಹಾಗೂ ವರ್ಜಿಸಲ್ಪಡಬೇಕಾದುದೂ ಆಗಿವೆ;

ಖುತುಲ್‌ಖುಲೂಬ್, ಹಾಗೂ ಇಮಾಂ ಗಝ್ಝಾಲಿಯವರ ಇಹ್‌ಯಾ-ಉಲೂಮುದ್ದೀನ್ ಎಂಬಿತ್ಯಾದಿ ಗ್ರಂಥಗಳಲ್ಲಿ ಅಥವಾ ಇನ್ನು ಕೆಲವು ಹದೀಸ್‌ಗಳಲ್ಲಿ ಈ ನಮಾಝ್‌ನ ಬಗ್ಗೆ ಹೇಳಲ್ಪಟ್ಟಿರುವುದರಿಂದ ಯಾರೊಬ್ಬರೂ ವಂಚಿತರಾಗ ಬೇಡಿರಿ. ಅವುಗಳೆಲ್ಲವೂ ಬಾತಿಲ್ ಆಗಿವೆ (ಪುರಾವೆಗೆ ಅರ್ಹವಾದುದಲ್ಲ.). ಕೆಲವು ಇಮಾಮರುಗಳು ಇದಕ್ಕೆ ಸಮಾನವಾದ ವಿಧಿಯನ್ನು ಹೇಳಿರುವುದು ಮತ್ತು ಅದು ಉತ್ತಮವಾಗಿದೆಯೆಂದು ಬರೆದಿರುವುದು ಮೋಸ ಹೋಗಲು ಹೇತುವಾಗದಿರಲಿ. ಅವರಿಗೆ ತಪ್ಪು ಸಂಭವಿಸಿದೆಯಷ್ಟೆ."(ಅಲ್-ಮಜ್‌ಮೂಅ್)

ಶೈಖ್ ಇಮಾಮ್ ಅಬೂ ಮುಹಮ್ಮದ್ ಅಬ್ದುರ್ರಹ್ಮಾನ್ ಅಲ್ ಮಖ್‌ದಿಸೀ(ﷺ)ರವರು ಶಅಬಾನ್ ತಿಂಗಳಲ್ಲಿ ಚಾಲ್ತಿಯಲ್ಲಿರುವ ಪ್ರತ್ಯೇಕ ನಮಾಝ್ ಮತ್ತು ಉಪವಾಸವು ಬಾತಿಲ್ ಆಗಿವೆ ಎಂಬುವುದನ್ನು ಸಮರ್ಥಿಸುವ ಒಂದು ಕೃತಿಯನ್ನೇ ರಚಿಸಿದ್ದಾರೆ. ಅವರು ಸುಸ್ಪಷ್ಟವಾದ ಮತ್ತು ತುಂಬಾ ಉತ್ತಮವಾದ ರೀತಿಯಲ್ಲಿ ಈ ವಿಷಯವನ್ನು ಆ ಕೃತಿಯಲ್ಲಿ ವಿವರಿಸಿದ್ದಾರೆ. ವಿದ್ವಾಂಸರುಗಳ ಅನೇಕ ವಾಕ್ಯಗಳು ಈ ವಿಷಯದಲ್ಲಿವೆ. ಅವುಗಳೆಲ್ಲವನ್ನೂ ಬರೆಯಲು ಹೋದರೆ ತುಂಬಾ ದೀರ್ಘವಾಗಬಹುದು. ಸತ್ಯಾನ್ವೇಷಿಗಳಿಗೆ ಇಲ್ಲಿ ಉಲ್ಲೇಖಿಲ್ಪಟ್ಟಿರುವುದು ಧಾರಾಳ.

ಭಿನ್ನಾಭಿಪ್ರಾಯವಿರುವ ವಿಷಯವನ್ನು ಖುರ್‌ಆನ್ ಮತ್ತು ಸುನ್ನತ್‌ನ ಕಡೆಗೆ ಮರಳಿಸಬೇಕಾದುದು ಸತ್ಯವಿಶ್ವಾಸಿಯ ಬಾಧ್ಯತೆಯಾಗಿದೆ. ಧರ್ಮಕ್ಕೆ ನೂತನವಾದುದನ್ನು ಸೇರಿಸುವವರು ವಾಸ್ತವದಲ್ಲಿ ಅಲ್ಲಾಹನ ಮತ್ತು ರಸೂಲರ ಹೆಸರಲ್ಲಿ ಸುಳ್ಳಾರೋಪವನ್ನು ಮಾಡುತ್ತಿದ್ದಾರೆ. ಅಲ್ಲಾಹನು ನುಡಿಯುತ್ತಾನೆ:

وَمَا اخْتَلَفْتُمْ فِيهِ مِنْ شَيْءٍ فَحُكْمُهُ إِلَى اللَّهِ

"ನೀವು ಯಾವ ವಿಷಯದಲ್ಲಿ ಭಿನ್ನಾಭಿಪ್ರಾಯದಲ್ಲಿದ್ದೀರೋ ಆ ವಿಷಯದಲ್ಲಿ ವಿಧಿ ಹೇಳಲಿಕ್ಕಿರುವ ಹಕ್ಕು ಅಲ್ಲಾಹನಿಗಿರುವುದಾಗಿದೆ" (ಶೂರಾ: 10).

قُلْ إِنْ كُنْتُمْ تُحِبُّونَ اللَّهَ فَاتَّبِعُونِي يُحْبِبْكُمُ اللَّهُ وَيَغْفِرْ لَكُمْ ذُنُوبَكُمْ وَاللَّهُ غَفُورٌ رَحِيمٌ

"(ಪ್ರವಾದಿಯವರೇ) ಹೇಳಿರಿ, ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ. ಹಾಗಾದರೆ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಪಾಪಗಳನ್ನು ಕ್ಷಮಿಸುವವನು ಮತ್ತು ಕರುಣಾನಿಧಿಯೂ ಆಗಿದ್ದಾನೆ"(ಆಲಿ-ಇಮ್ರಾನ್:31)

ಆಯಿಶಾ(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು:« مَنْ أَحْدَثَ فِي أَمْرِنَا هَذَا مَا لَيْسَ فِيهِ فَهُوَ رَدٌّ» "ಯಾರಾದರೂ ನಮ್ಮ ಈ ಕಾರ್ಯದಲ್ಲಿ(ಧರ್ಮದಲ್ಲಿ) ನೂತನವಾಗಿ ಯಾವುದನ್ನಾದರೂ ರಚಿಸಿದರೆ ಅದು ತಿರಸ್ಕರಿಸಲ್ಪಡಬೇಕಾದುದಾಗಿದೆ" (ಬುಖಾರಿ, ಮುಸ್ಲಿಮ್).

ಜಾಬಿರ್(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ಜುಮುಅ ಖುತುಬದಲ್ಲಿ ಈ ರೀತಿ ಹೇಳಿದರು: "ಇನ್ನು ನಾನು ಹೇಳಲೇ:

«وَيَقُولُ أَمَّا بَعْدُ فَإِنَّ خَيْرَ الْحَدِيثِ كِتَابُ اللهِ وَخَيْرَ الْهَدِي هَدِي مُحَمَّدٍ (ﷺ) وَشَرَّ الأُمُورِ مُحْدَثَاتُهَا وَكُلَّ بِدْعَةٍ ضَلاَلَة»

ಮಾತುಗಳಲ್ಲಿ ಅತೀ ಉತ್ತಮವಾದುದು ಅಲ್ಲಾಹನ ಗ್ರಂಥವಾಗಿದೆ. ಚರ್ಯೆಗಳಲ್ಲಿ ಅತೀ ಉತ್ತಮವಾದುದು ಪ್ರವಾದಿ(ﷺ)ರವರ ಚರ್ಯೆಯಾಗಿದೆ. ಕಾರ್ಯಗಳಲ್ಲಿ ಅತೀ ಕೆಟ್ಟದು ನೂತನವಾಗಿ ನಿರ್ಮಿಸಲ್ಪಟ್ಟವುಗಳಾಗಿವೆ. ನೂತನವಾಗಿ ನಿರ್ಮಿಸಲ್ಪಡುವ ಸರ್ವವು ಪಥಭ್ರಷ್ಟತೆಯಾಗಿವೆ"(ಮುಸ್ಲಿಮ್)

ಈ ವಿಷಯದಲ್ಲಿ ಆಯತ್ ಮತ್ತು ಹದೀಸ್‌ಗಳು ತುಂಬಾ ಇವೆ. ಅವುಗಳೆಲ್ಲವೂ ಅಲ್ಲಾಹನು ಈ ಧರ್ಮವನ್ನು ಈ ಉಮ್ಮತ್‌ಗೆ ಪರಿಪೂರ್ಣ ಗೊಳಿಸಿ ಕೊಟ್ಟಿದ್ದಾನೆಂದೂ ಅವನ ಅನುಗ್ರಹವನ್ನೂ ಪೂರ್ತಿ ಗೊಳಿಸಿದ್ದಾನೆಂದೂ ಸ್ಪಷ್ಟಪಡಿಸುತ್ತದೆ. ಅವನ ಸಂದೇಶವನ್ನು ಸ್ಪಷ್ಟವೂ ಪೂರ್ತಿಯೂ ಮಾಡಿ ಕೊಟ್ಟ ಬಳಿಕವೇ ಅಲ್ಲಾಹನು ಅವನ ರಸೂಲರಾದ ಮುಹಮ್ಮದ್(ﷺ)ರವರಿಗೆ ಮರಣ ಕೊಟ್ಟಿರುವುದು.

ಮೇಲೆ ಕೊಡಲಾದ ಆಯತ್, ಹದೀಸ್ ಮತ್ತು ವಿದ್ವಾಂಸರುಗಳ ವಾಕ್ಯಗಳಿಂದ, ಶಅಬಾನ್ 15ರಂದು ಪ್ರತ್ಯೇಕವಾದ ನಮಾಝ್ ಉಪವಾಸ ಎಂಬಿತ್ಯಾದಿ ಆಚಾರಗಳು ಅನುಷ್ಠಿಸುವುದು ಅನಾಚಾರ(ಬಿದ್‌ಅತ್)ವಾಗಿದೆ ಎಂದೂ, ಪವಿತ್ರವಾದ ದೀನುಲ್ ಇಸ್ಲಾಮ್‌ನ ಪ್ರಮಾಣಗಳಲ್ಲಿ ಅವುಗಳಿಗೆ ಯಾವುದೇ ಪುರಾವೆಗಳಿಲ್ಲವೆಂದೂ ಹಾಗೂ ಅವುಗಳೆಲ್ಲವೂ ಸ್ವಹಾಬಿಗಳ ಕಾಲಾ ನಂತರ ಬಂದು ಸೇರಿದವುಗಳೆಂದೂ ಓರ್ವ ಸತ್ಯಾನ್ವೇಷಿಗೆ ಸ್ಪಷ್ಟವಾಗಿ ತಿಳಿಯಬಹುದು. ಅಲ್ಲಾಹನು ಹೇಳುತ್ತಾನೆ:

الْيَوْمَ أَكْمَلْتُ لَكُمْ دِينَكُمْ وَأَتْمَمْتُ عَلَيْكُمْ نِعْمَتِي وَرَضِيتُ لَكُمُ الْإِسْلَامَ دِينًا

"ಇಂದಿನ ದಿನದಂದು ನಿಮಗೆ ನಿಮ್ಮ ದೀನನ್ನು ಪರಿಪೂರ್ಣ ಗೊಳಿಸಿದ್ದೇವೆ. ನನ್ನ ಅನುಗ್ರಹವನ್ನು ನಿಮಗೆ ಪೂರ್ತಿ ಮಾಡಿ ಕೊಟ್ಟಿದ್ದೇವೆ. ಇಸ್ಲಾಮ್ ದೀನನ್ನು ನಿಮಗೆ ಧರ್ಮವೆಂಬ ನೆಲೆಯಲ್ಲಿ ತೃಪ್ತಿ ಪಟ್ಟು ಕೊಟ್ಟಿದ್ದೇವೆ"(ಅಲ್ ಮಾಇದಃ 3)

ಅಬೂ ಹುರೈರಃ(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು: ಶುಕ್ರವಾರವನ್ನು ನಮಾಝ್‌ನ ಮೂಲಕ(ಪ್ರತ್ಯೇಕವಾದ ನಮಾಝನ್ನು ಅನುಷ್ಠಿಸುವ ಮೂಲಕ) ಪ್ರತ್ಯೇಕ ಗೊಳಿಸಬೇಡಿರಿ ಮತ್ತು ಅದರ ಹಗಲನ್ನು ಉಪವಾಸ ಆಚರಿಸುವ ಮೂಲಕ ಪ್ರತ್ಯೇಕ ಗೊಳಿಸಬೇಡಿರಿ. ಸಾಮಾನ್ಯವಾಗಿ ಇತರ ದಿನಗಳಲ್ಲಿ ಉಪವಾಸ ಆಚರಿಸುತ್ತಾ ಬರುವವನ ಹೊರತು" ಯಾವುದಾದರೊಂದು ರಾತ್ರಿಯಲ್ಲಿ ಯಾವುದೇ ಆರಾಧನೆ ಮಾಡಬಹುದಿರುತ್ತಿದ್ದರೆ ಶುಕ್ರವಾರ ರಾತ್ರಿ ಅದಕ್ಕೆ ಅತ್ಯಂತ ಅರ್ಹವಾದುದಾಗಿದೆ. ಕಾರಣ ಶುಕ್ರವಾರ ದಿನ ಸೂರ್ಯನು ಉದಿಸುವ ದಿನಗಳಲ್ಲಿ ಅತ್ಯಂತ ಶ್ರೇಷ್ಠವಾಗಿದೆ. ಆ ದಿನದಂದೂ ಪ್ರತ್ಯೇಕವಾದ ಯಾವುದೇ ಆರಾಧನೆಯನ್ನು ಅನುಷ್ಠಿಸಬಾರದೆಂದು ಪ್ರವಾದಿ(ﷺ)ರವರು ತಾಕೀತು ನೀಡಿರುವಾಗ ಅದು ಇತರ ದಿನಗಳಲ್ಲಾದರೆ ಅದರ ಅವಸ್ಥೆಯೇನು?

ರಮದಾನಿನ ರಾತ್ರಿಗಳಲ್ಲಿ ಮತ್ತು ಲೈಲತುಲ್ ಖದ್ರ್‌ನ ರಾತ್ರಿಯಲ್ಲಿ ನಮಾಝ್ ನಿರ್ವಹಿಸಲು ಪ್ರವಾದಿ(ﷺ)ರವರು ಪ್ರೇರಣೆ ನೀಡಿದ್ದಾರೆ ಹಾಗೂ ಸ್ವಯಂ ಮಾಡಿ ತೋರಿಸಿದ್ದಾರೆ. ಅವರು ಹೇಳಿದರು:

« مَنْ قَامَ رَمَضَانَ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ »

"ಯಾರಾದರೂ ವಿಶ್ವಾಸದೊಂದಿಗೆ ಮತ್ತು ಪ್ರತಿಫಲಾಪೇಕ್ಷೆಯೊಂದಿಗೆ ರಮದಾನಿನಲ್ಲಿ ನಿಂತು ನಮಾಝ್ ನಿರ್ವಹಿಸಿದರೆ ಅವನ ಗತ ಕಾಲದ ಪಾಪಗಳು ಕ್ಷಮಿಸಲ್ಪಡುವುದು."

«مَنْ قَامَ لَيْلَةَ الْقَدْرِ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ ».

"ಯಾರಾದರೂ ವಿಶ್ವಾಸದೊಂದಿಗೆ ಮತ್ತು ಪ್ರತಿಫಲಾಪೇಕ್ಷೆಯೊಂದಿಗೆ ಲೈಲತುಲ್ ಖದ್ರ್‌ನಂದು ನಿಂತು ನಮಾಝ್ ನಿರ್ವಹಿಸಿದರೆ ಅವನ ಗತಕಾಲದ ಪಾಪಗಳು ಕ್ಷಮಿಸಲ್ಪಡುವುದು."(ಬುಖಾರಿ-ಮುಸ್ಲಿಮ್)

ಇಷ್ಟು ಸ್ಪಷ್ಟವಾಗಿ ವಿಷಯಗಳನ್ನು ಕಲಿಸಿ ಕೊಟ್ಟಿರುವ ಪ್ರವಾದಿ(ﷺ)ರವರು ಶಅಬಾನ್ 15ರಂದು, ರಜಬ್‌ನ ಪ್ರಥಮ ಶುಕ್ರವಾರದಂದು ಮತ್ತು ಇಸ್ರಾಅ್-ಮಿಅ್‌ರಾಜ್‌ನ ರಾತ್ರಿಯಂದು ಯಾವುದಾದರೂ ಪ್ರತ್ಯೇಕ ಆರಾಧನೆಗಳಿರುತ್ತಿದ್ದರೆ ಅದನ್ನು ಪ್ರವಾದಿ(ﷺ)ರವರು ಹೇಳಿ ಕೊಡುತ್ತಿದ್ದರು ಅಥವಾ ಮಾಡಿ ತೋರಿಸುತ್ತಿದ್ದರು. ಅವರು ಆ ರೀತಿ ಮಾಡಿರುತ್ತಿದ್ದರೆ ಅದನ್ನು ಸ್ವಹಾಬಿಗಳು ವರದಿ ಮಾಡುವ ಮೂಲಕ ನಮಗೆ ತಿಳಿಸುತ್ತಿದ್ದರು. ಅವರು ಅದನ್ನು ಎಂದಿಗೂ ಮುಚ್ಚಿಡುತ್ತಿರಲಿಲ್ಲ. ಕಾರಣ ಅವರು ಜನರಲ್ಲಿ ಅತೀ ಉತ್ತಮರು ಮತ್ತು ಅಂಬಿಯಾಗಳ ನಂತರ, ಜನರಲ್ಲಿ ಒಳಿತುಂಟಾಗ ಬೇಕೆಂದು ಅತ್ಯಧಿಕ ಆಗ್ರಹಿಸಿದವರೂ

ಆಗಿದ್ದಾರೆ. ಅವರ ಮೇಲೆ ಅಲ್ಲಾಹನ ಕರುಣೆಯು ವರ್ಷಿಸಲಿ.(ಆಮೀನ್)

## الاحتفال بليلة الإسراء والمعراج

## ಇಸ್ರಾಅ್ ಮತ್ತು ಮಿಅ್‌ರಾಜ್

ಇದರೊಂದಿಗೆ ತಿಳಿದಿರಬೇಕಾದ ಮತ್ತೊಂದು ವಿಷಯವಾಗಿದೆ ರಜಬ್ 27ನೇ ರಾತ್ರಿಯ ವಿಧಿ. ಇಸ್ರಾಅ್-ಮಿಅ್‌ರಾಜ್ ನಡೆದಿರುವುದು ಈ ದಿನದಲ್ಲಾಗಿದೆ ಎಂದು ಕೆಲವರು ಭಾವಿಸಿದ್ದಾರೆ. ಆದರೆ ಅದನ್ನು ದೃಢೀಕರಿಸಲ್ಪಡುವ ಯಾವುದೇ ಸ್ವಹೀಹಾದ ಹದೀಸ್ ವರದಿಯಾಗಲಿಲ್ಲ. ಆದುದರಿಂದ ಆ ದಿನದಂದು ಪ್ರತ್ಯೇಕವಾದ ಆರಾಧನೆಗಳನ್ನು ಅನುಷ್ಠಿಸುವುದು ಮತ್ತು ಆ ದಿನವನ್ನು ಆಘೋಷಿಸುವುದು ಅನುವದನೀಯವಲ್ಲ. ಮೇಲೆ ಪರಾಮರ್ಶಿಸಲ್ಪಟ್ಟ ಆಧಾರಗಳನ್ನೇ ಇಲ್ಲೂ ಅವಲಂಭಿಸಬೇಕಾಗಿದೆ. ಇಸ್ರಾಅ್-ಮಿಅ್‌ರಾಜ್ ನಡೆದಿರುವುದು ಯಾವ ವರ್ಷದಲ್ಲಿ, ಯಾವ ತಿಂಗಳಲ್ಲಿ ಮತ್ತು ಯಾವ ದಿನದಲ್ಲಿ ಎಂಬುವುದು ವ್ಯಕ್ತವಾಗಲಿಲ್ಲವೆಂದು ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಇಸ್ರಾಅ್ ಮತ್ತು ಮಿಅ್‌ರಾಜ್ ರಜಬ್ 27ರಂದು ನಡೆದಿದೆ ಎಂಬ ವಾದವು ಅಸತ್ಯವಾಗಿದೆ. ಸ್ವಹೀಹಾದ ಹದೀಸ್‌ಗಳಲ್ಲಿ ಅದಕ್ಕೆ ಯಾವುದೇ ಪುರಾವೆಗಳಿಲ್ಲ.

ಸುನ್ನತನ್ನು ಬಿಗಿಯಾಗಿ ಹಿಡಿದು ಅದರಲ್ಲಿ ದೃಢವಾಗಿ ನಿಲ್ಲಲು ಮತ್ತು ಸುನ್ನತ್‌ಗೆ ವಿರುದ್ಧವಾಗಿ ನಡೆಯುವುದರಿಂದ ದೂರ ಸರಿಯಲು ಅಲ್ಲಾಹನು ನಮಗೆ ತೌಫೀಕ್ ನೀಡಲಿ(ಆಮೀನ್).

وآخر دعوانا عن الحمد لله رب العالمين

**ಶೈಖ್ ಅಬ್ದುಲ್ ಅಝೀಝ್ ಇಬ್ನ್ ಬಾಝ್(رحمه الله)**
**ಅನುವಾದ: ಅಬ್ದುಲ್ ಮಜೀದ್ ಎಸ್. ಎಮ್**